## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,

**ಸಿ.ಸಿ. ಸಂಖ್ಯೆಃ 1308/2022**

**ಸಿ.ಡಬ್ಲ್ಯೂ: 15 /ಪಿ.ಡಬ್ಲ್ಯೂಃ 14**
**ಪ್ರಮಾಣೀಕರಿಸಿದ ದಿನಾಂಕಃ 17.12.2024**

| | |
|---|---|
| ಹೆಸರು | ಅಜಯ್ |
| ತಂದೆಯ ಹೆಸರು | ಬಾಬು |
| ವಯಸ್ಸು | 22 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಾಸ | ಗೌತಂ ನಗರ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1, 2, 14 ರವರು ಪರಿಚಯ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ಇಲ್ಲ.

2. ದಿಃ 27.02.2022 ರಂದು ಮನೆಯಲ್ಲಿರುವಾಗ ಚಾಸಾ2 ರವರು ಮನೆಗೆ ಬಂದು ಚಾಸಾ1 ರವರನ್ನು ಯಾರೋ ಹೊಡೆದು ಒಡವೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆಂದು ಹೇಳಿರುತ್ತಾರೆ. ನಂತರ ಚಾಸಾ1 ರವರು ಕೆಳಗಡೆ ಮನೆಯಲ್ಲಿರುವ ಬಾಡಿಗೆದಾರರು ಈ ರೀತಿ ಮಾಡಿರುತ್ತಾರೆಂದು ಹೇಳಿರುತ್ತಾರೆ. ಚಾಸಾ1 ರವರನ್ನು ಚಾಸಾ14 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಬಗ್ಗೆ ತಿಳಿಸಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. 1 ನೇ ಆರೋಪಿ ಚಾಸ-1 ರವರನ್ನು ವಾಲ್ ಮಿಕ್ಚರ್ ನಿಂದ ಹೊಡೆದು ಒಡವೆಗಳನ್ನು ಕಳ್ಳತನ ಮಾಡಿರುವ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಮೇಲಿ ನಂತೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ13 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಎಸ್ ಆರ್ ಜೆ ವಕೀಲರಿಂದಃ-**

4. ಚಾಸಾ1 ರವರ ಮನೆಯಲ್ಲಿ 4 ಮನೆಗಳು ಬಾಡಿಗೆಗೆ ಇರುತ್ತದೆ. ಸದರಿ ಮನೆಗಳಲ್ಲಿ ಬಾಡಿಗೆದಾರರು ಇರುವ ಬಗ್ಗೆ ಗೊತ್ತಿರುವುದಿಲ್ಲ. ನನಗೆ ಘಟನೆ ಬಗ್ಗೆ ಚಾಸ-2 ರವರ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟ ದಿನಾಂಕ ನೆನಪಿಲ್ಲ. ನನಗೆ ಕನ್ನಡ ಓದಲು ಬರುತ್ತದೆ ಆದರೆ ಬರೆಯಲು ಬರುವುದಿಲ್ಲ. ಚಾಸಾ1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,
**ಸಿ.ಸಿ. ಸಂಖ್ಯೆ: 1308/2022**

**ಸಿ.ಡಬ್ಲ್ಯೂ: 14 /ಪಿ.ಡಬ್ಲ್ಯೂ: 13**
**ಪ್ರಮಾಣೀಕರಿಸಿದ ದಿನಾಂಕ: 17.12.2024**

| | |
|---|---|
| ಹೆಸರು | ಮೇರಿ ಕಾರ್ಮೆಲ್ |
| ತಂದೆಯ ಹೆಸರು | ಪುಷ್ಪನಾಥ |
| ವಯಸ್ಸು | 62 ವರ್ಷ |
| ವೃತ್ತಿ | ನಿವೃತ್ತ ಶಿಕ್ಷಕರು |
| ವಾಸ | ಗೌತಂ ನಗರ |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

ಚಾಸಾ 1 ನನ್ನ ಅಕ್ಕ. ಚಾಸಾ 2, 6, 13, 15, 16 ರವರು ಪರಿಚಯ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ಇಲ್ಲ.
2. ದಿ: 27.02.2022 ರ ಸಂಜೆ 7.30 ಗಂಟೆ ಸಮಯದಲ್ಲಿ ಗೌತಂ ನಗರದ ಮನೆಯಲ್ಲಿರುವಾಗ ನನ್ನ ಅಕ್ಕನ ಮನೆಯಲ್ಲಿರುವ ಬಾಡಿಗೆದಾರರು ಒಬ್ಬರು ಬಂದು ನನ್ನ ಅಕ್ಕನಿಗೆ ರಕ್ತ ಬರುತ್ತಿರುವ ಬಗ್ಗೆ ತಿಳಿಸಿದಾಗ ನಾನು ಕೂಡಲೇ ಚಾಸ-1 ರವರ ಮನೆಯ ಬಳಿ ಬಂದಿರುತ್ತೇನೆ. ನಾನು ಚಾಸಾ1 ರವರ ಮನೆಯ ಬಳಿ ಬಂದಾಗ ಚಾಸಾ1 ರವರ ತಲೆಯಿಂದ ರಕ್ತ ಬರುತ್ತಿರುವಾಗ ಚಾಸಾ13 ರವರೂ ಸಹ ಮನೆಯಲ್ಲಿರುತ್ತಾರೆ. ನಂತರ ನಾನು ಮತ್ತು ಚಾಸ-13 ರವರು ಚಾಸಾ1 ರವರನ್ನು ಕೆ ಜಿ ಎಫ್ ಜನರಲ್ ಆಸ್ಪತ್ರೆಗೆ ಆಟೋದ ಮೂಲಕ ಕರೆದುಕೊಂಡು ಹೋಗಿರುತ್ತೇವೆ. ನಾನು ಮತ್ತು ಚಾಸ-1 ರವರ ಆಟೋದಲ್ಲಿ ಹೋಗುತ್ತಿರುವಾಗ ನನ್ನ ಅಕ್ಕನಾದ ಚಾಸ-1 ರವರು ಬಾಡಿಗೆ ಕೊಟ್ಟಿದ್ದ ಒಬ್ಬ ಹುಡುಗ ಮನೆಗೆ ಬಂದು ಚಿಲಕ ಹಾಕಿ ಸುತ್ತಿ ಇಂದ ತಲೆಗೆ ಹೊಡೆದಿರುತ್ತಾನೆಂದು ತಿಳಿಸಿರುತ್ತಾರೆ. ಚಾಸಾ1 ರವರಿಗೆ ಕೆ ಜಿ ಎಫ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಮತ್ತು ಮನೆಯಲ್ಲಿ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲು:- ಮಾನ್ಯ ಸ.ಸ.ಅ ರವರಿಂದ:-**

3. 1 ನೇ ಆರೋಪಿ ಚಾಸ-1 ರವರನ್ನು ವಾಲ್ ಮಿಕ್ಚರ್ ನಿಂದ ಹೊಡೆದು ಒಡವೆಗಳನ್ನು ಕಳ್ಳತನ ಮಾಡಿರುವ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು:- ಆರೋಪಿಗಳ ಪರ ಶ್ರೀ ಎಸ್ ಆರ್ ಜೆ ವಕೀಲರಿಂದ:-**

4. ನಮ್ಮ ಅಕ್ಕನ ಮನೆಯಲ್ಲಿ 4 ಮನೆಗಳಲ್ಲಿ ಬಾಡಿಗೆಗೆ ಇರುತ್ತಾರೆ. ನನಗೆ ಬಾಡಿಗೆದಾರರ ಹೆಸರು ಗೊತ್ತಿಲ್ಲ. ನಾನೂ ಸಹ ಬಾಡಿಗೆದಾರರನ್ನು ನೋಡಿಲ್ಲ. ನಮ್ಮ ಮನೆಯಿಂದ ನಮ್ಮ ಅಕ್ಕನ ಮನೆ ಸುಮಾರು 30 ಅಡಿ ಅಂತರವಿದೆ. ನನಗೆ ಘಟನೆ ಬಗ್ಗೆ ಹೇಳಿದ ವ್ಯಕ್ತಿಯ ಹೆಸರು ಗೊತ್ತಿಲ್ಲ. ನನಗೆ ಘಟನೆ ಬಗ್ಗೆ ಗೊತ್ತಾದ ತಕ್ಷಣ ಅಂದರೆ 5 ನಿಮಿಷಗಳಲ್ಲಿ ಹೋಗಿರುತ್ತೇನೆ. ನನ್ನ ಮನೆ ಮತ್ತು ಅಕ್ಕನ ಮನೆಯ ಮದ್ಯ ಇರುವ ರಸ್ತೆಯಲ್ಲಿ ಜನಸಂದಣಿ ಇರುವ ಮುಖ್ಯರಸ್ತೆ ಎಂದರೆ ಸರಿ. ನನ್ನ ಅಕ್ಕನ ಮನೆಯಲ್ಲಿ ಯಾವುದಾದರೂ ಘಟನೆ ನಡೆದರೆ ಸ್ಥಳೀಯರಿಗೆ ಗೊತ್ತಾಗುತ್ತದೆ ಎಂದರೆ ಸರಿ. ನಮ್ಮ ಅಕ್ಕನ ಮನೆಗೆ ಹೋದಾಗ ಚಾಸಾ1 ಮತ್ತು 13 ರವರು ಮಾತ್ರ ಇರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಹೇಳಿಕೆಯನ್ನು ದಿ:27.2.22 ರಂದು ಕೊಟ್ಟಿರುತ್ತೇನೆ. ಒಂದು ವಾರದ ನಂತರ ಪುನಃ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನಾನು ಮೇಲೆ ಹೇಳಿದಂತೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಾನು ಮನೆಯಲ್ಲಿರುವಾಗ ಬಾಡಿಗೆದಾರರು ಬಂದು ಚಾಸಾ1 ರವರಿಗೆ ರಕ್ತ ಬಂದಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೂಡಲೇ ಹೋಗಿ ಚಾಸ-1 ರವರನ್ನು ಚಾಸಾ13 ರವರ ಜೊತೆ ಆಸ್ಪತ್ರೆಗೆ ಕರೆದು ಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಅಕ್ಕನಾದ ಚಾಸಾ1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ: 1308/2022**

**ಸಿ.ಡಬ್ಲ್ಯೂ: 13 /ಪಿ.ಡಬ್ಲ್ಯೂ: 12**
**ಪ್ರಮಾಣೀಕರಿಸಿದ ದಿನಾಂಕ: 17.12.2024**

| | |
|---|---|
| ಹೆಸರು | ನಯಾಜ್ |
| ತಂದೆಯ ಹೆಸರು | ಸಾಬ್ ಜಾನ್ |
| ವಯಸ್ಸು | 56 ವರ್ಷ |
| ವೃತ್ತಿ | ಟಿಂಬರ್ ಕೆಲಸ |
| ವಾಸ | ಕಾರೋನೇಶನ್ ಟೌನ್ |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

ಚಾಸಾ 1 ಪರಿಚಯ. ಆರೋಪಿಗಳ ಪರಿಚಯ ಇಲ್ಲ.

2. ಸುಮಾರು 2 ವರ್ಷಗಳ ಹಿಂದೆ ಸಂಜೆ 7-8 ಗಂಟೆ ಸಮಯದಲ್ಲಿ ಮನೆಯಲ್ಲಿರುವಾಗ ನಮ್ಮ ಎದುರು ಮನೆಯಲ್ಲಿ ವಾಸವಾಗಿದ್ದ ಚಾಸಾ1 ರವರು ಮೊದಲನೇ ಅಂತಸ್ತಿನ ಮೇಲಿನಿಂದ ತಮಿಳಿನಲ್ಲಿ ಕಾಪಾತು ಕಾಪಾತು ರಕ್ತ ಕಾರುದು ಪುಡಿಚಿಕೋ ಲಾಕ್ ಪೊನ್ನಿಟಿರಾಂಗೋ ಎಂದು ಕರೆದಾಗ ನಾನು ಕೂಡಲೇ ಹೋಗಿ ಲಾಕ್ ತೆಗೆದಿರುತ್ತೇನೆ. ನಂತರ ಚಾಸಾ1 ರವರನ್ನು ನೋಡಿದಾಗ ರಕ್ತ ಬರುತ್ತಿದ್ದು ನಾನು ಮತ್ತು ಚಾಸಾ1 ರವರ ತಂಗಿ ರವರು ಇಬ್ಬರೂ ಸೇರಿಕೊಂಡು ಆಟೋದ ಮೂಲಕ ಕೆ ಜಿ ಎಫ್ ಜನರಲ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿರುತ್ತೇನೆ. ಚಾಸಾ1 ರವರು ನನಗೆ ಬಾಡಿಗೆ ಮನೆಯವರು ಹೊಡೆದಿರುತ್ತಾರೆಂದು ಹೇಳಿರುತ್ತಾರೆ. ನಾನು ಆರೋಪಿಯನ್ನು ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲು:- ಮಾನ್ಯ ಸ.ಸ.ಅ ರವರಿಂದ:-**

3. 1 ನೇ ಆರೋಪಿ ಚಾಸ-1 ರವರನ್ನು ವಾಲ್ ಮಿಕ್ಸರ್ ನಿಂದ ಹೊಡೆದು ಒಡವೆಗಳನ್ನು ಕಳ್ಳತನ ಮಾಡಿರುವ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸ-1 ರವರನ್ನು ಹೊಡೆದು ಮನೆ ಯಿಂದ ಚಾಕುವನ್ನು ತೆಗೆದುಕೊಂಡು ಓಡಿಹೋಗುತ್ತಿರುವಾಗ ನಾನು ಹಿಡಿದುಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಪೊಲೀಸರಿಗೆ ಚಾಸಾ1 ರವರನ್ನು ಆಸ್ಪತ್ರೆಗೆ ಸೇರಿಸಿರುವ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಆದರೆ 1 ನೇ ಆರೋಪಿಯನ್ನು ಹಿಡಿದುಕೊಂಡಿರುವ ಬಗ್ಗೆ ಮತ್ತು ಚಾಸಾ1 ರವರನ್ನು ಹಲ್ಲೆ ಮಾಡಿ ಕಳ್ಳತನ ಮಾಡಿರುವ ಬಗ್ಗೆ ಹೇಳಿರುವುದಿಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ12 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು:- ಆರೋಪಿಗಳ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದ:-**

4. ನಾನು ಹೇಳಿದಂತೆ ಚಾಸಾ1 ರವರು ಮನೆ ಇಂದ ಕೂಗಿಕೊಂಡಾಗ ನಾನು ಹೋಗಿ ಲಾಕ್ ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರಿಗೆ ತಲೆ ಇಂದ ರಕ್ತಸ್ರಾವ್ರ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ1 ರವರ ಅಕ್ಕಪಕ್ಕದ ಮನೆಯವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.**

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,

**ಸಿ.ಸಿ. ಸಂಖ್ಯೆಃ 1308/2022**

ಸಿ.ಡಬ್ಲ್ಯೂ: 9 /ಪಿ.ಡಬ್ಲ್ಯೂಃ 11
ಪ್ರಮಾಣೀಕರಿಸಿದ ದಿನಾಂಕಃ 17.12.2024

| | |
|---|---|
| ಹೆಸರು | ವಿನೋದ್ |
| ತಂದೆಯ ಹೆಸರು | ಲಾಲ್ |
| ವಯಸ್ಸು | 26 ವರ್ಷ |
| ವೃತ್ತಿ | ಸೂಪರ್ ವೈಸರ್ |
| ವಾಸ | ಉರಿಗಾಂ ಪೇಟೆ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 10 ರಿಂದ 12 ಮತ್ತು ಆರೋಪಿಗಳ ಪರಿಚಯ ಇಲ್ಲ.

2. ಸಾಕ್ಷಿಯು ನಿಪಿ8 ಪಂಚನಾಮೆಯರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಯನ್ನು ನಿಪಿ8 ಡಿ ಎಂದು ಗುರುತಿಸಲಾಯಿತು. 2022 ರಂದು ಕೆ ಜಿ ಎಪ ಮಾರ್ಕೆಟ್ ಬಳಿ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ ನಿಪಿ8 ರ ದಾಖಲೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಹಾಲಿ ಪ್ರಕರಣದ ಬಗ್ಗೆ ಬೇರೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. ದಿಃ 10.3.2022 ರಂದು 2 ನೇ ಆರೋಪಿ ತೆಗೆದುಕೊಂಡು ಬಂದು ಕೊಟ್ಟಂತಹ ಒಡವೆಗಳನ್ನು ನನ್ನ ಮತ್ತು ಚಾಸಾ10, 11 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ8 ರ ಪಂಚನಾಮೆಯನ್ನು ಪೊಲೀಸರು ಬರೆದಾಗ ನಾನೂ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ12 ರವರು ಒಡವೆಗಳನ್ನು ಪರೀಕ್ಷಿಸಿ ತೂಕ ಮಾಡಿರುತ್ತಾರೆಂದರೆ ಸರಿಯಲ್ಲ. ನಿಪಿ8 ರ ಪಂಚನಾಮೆ ಬಗ್ಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ- ಇಲ್ಲ.**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.

<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**</u>

<u>**ಸಿ.ಸಿ. ಸಂಖ್ಯೆಃ 1308/2022**</u>

**ಸಿ.ಡಬ್ಲೂ: 11 /ಪಿ.ಡಬ್ಲೂಃ 10**

**ಪ್ರಮಾಣೀಕರಿಸಿದ ದಿನಾಂಕಃ 17.12.2024**

| | |
|---|---|
| **ಹೆಸರು** | ರಾಧಾಕೃಷ್ಣ |
| **ತಂದೆಯ ಹೆಸರು** | ಪಳನಿ ಮುತ್ತು |
| **ವಯಸ್ಸು** | 62 ವರ್ಷ |
| **ವೃತ್ತಿ** | ಕಾನೂನು ಸಲಹೆಗಾರರು |
| **ಸ್ಥಳ** | ವಿಲ್ಲುಪುರಂ |

<u>**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**</u>

1. ಚಾಸಾ9, 10, 12 ರವರು ಗೊತ್ತಿಲ್ಲ. 2ನೇ ಆರೋಪಿ ಪರಿಚಯ ಇರುತ್ತಾನೆ. 1ನೇ ಆರೋಪಿಯನ್ನು ಹಾಲಿ ಪ್ರಕರಣದ ಪಂಚನಾಮೆ ಮಾಡುವಾಗ ನೋಡಿರುತ್ತೇನೆ.

2. ಸಾಕ್ಷಿಯು ನಿಪಿ8 ಪಂಚನಾಮೆಯರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಯನ್ನು ನಿಪಿ8ಸಿ ಎಂದು ಗುರುತಿಸಲಾಯಿತು. ದಿಃ10.3.2022 ರಂದು ಕಳ್ಳತನ ವಿಚಾರವಾಗಿ 2ನೇ ಆರೋಪಿ ತೆಗೆದುಕೊಂಡು ಬಂದ ಒಡವೆಗಳನ್ನು ನನ್ನ ಸಮಕ್ಷಮ ಚಾಸಾ12 ರವರು ಒಡವೆಗಳನ್ನು ಪರೀಕ್ಷಿಸಿ ಮತ್ತು ತೂಕ ಮಾಡಿ ಕೊಟ್ಟಾಗ ಸಹಿ ಮಾಡಿರುತ್ತೇನೆ. ನಾನು ಘಟನೆ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯು ಎರಡು ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ಭಾರತ ಸಾಕ್ಷಿ ಅಧಿನಿಯಮದ ಕಲಂ65ಬಿ ಗೆ ಒಳಪಟ್ಟು ನಿಪಿ10 ಮತ್ತು 11 ಎಂದು ಗುರುತಿಸಲಾಯಿತು. ನಿಪಿ10 ಮತ್ತು 11 ರ ಭಾವಚಿತ್ರದಲ್ಲಿರುವ ಒಡವೆಗಳನ್ನು ಪುನಃ ನೋಡಿದರೆ ಗುರ್ತಿಸುತ್ತೇನೆ.

<u>**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ-**</u>

3. ನಾನು ಪೊಲೀಸ್ ಠಾಣೆಗೆ ಬಂದಾಗ ಬೆಳಿಗ್ಗೆ 10.30 ಗಂಟೆ ಆಗಿತ್ತು. 1 ನೇ ಆರೋಪಿಯನ್ನು ಮೊದಲು ಠಾಣೆಯಲ್ಲಿ ನೋಡಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋಗಿ ಯಾವುದೇ ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಠಾಣೆಯಲ್ಲಿ ನೋಡುವ ಮೊದಲು ಗೊತ್ತಿಲ್ಲ. ನಾನು ಹೇಳಿದಂತೆ ಯಾವುದೇ ಕಳ್ಳತನವಾಗದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಆದರೆ ಪೊಲೀಸರು ಓದಿ ಹೇಳಿದ ನಂತರ ಗೊತ್ತಾಗಿರುತ್ತದೆ. ನಾನು ಹೇಳಿದಂತೆ ಪೊಲೀಸ್ ಠಾಣೆಗೆ ಹೋಗಿ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ನಾನು ಬೆಸ್ಟ ಮನಿ ಗೊಲ್ಡ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ಗುರುತಿನ ಚೀಟಿ ಇರುವುದಿಲ್ಲ. ನಾನು ಲಾ ಡಿಗ್ರಿ ಓದಿರುವುದಿಲ್ಲ. ನಾನು ಹೇಳಿದಂತೆ ಬೆಸ್ಟ ಮನಿ ಗೋಲ್ಡ ಕಂಪನಿಯಲ್ಲಿ ಯಾವುದೇ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆಃ 1308/2022**

**ಸಿ.ಡಬ್ಲೂ: 12 /ಪಿ.ಡಬ್ಲೂಃ 9**

**ಪ್ರಮಾಣೀಕರಿಸಿದ ದಿನಾಂಕಃ 17.12.2024**

| | |
|---|---|
| **ಹೆಸರು** | **ಕುಪೇಂದ್ರನ್** |
| **ತಂದೆಯ ಹೆಸರು** | **ಮುನಿಸ್ವಾಮಾಚಾರಿ** |
| **ವಯಸ್ಸು** | 52 ವರ್ಷ |
| **ವೃತ್ತಿ** | ಅಕ್ಕಸಾಲಿಗ |
| **ವಾಸ** | **ರಾಬರ್ಟಸನ್ ಪೇಟೆ** |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1, 2, 9 ರಿಂದ 11 ರವರು ಗೊತ್ತಿಲ್ಲ.

2. ಸಾಕ್ಷಿಯು ನಿಪಿ8 ಪಂಚನಾಮೆಯರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಯನ್ನು ನಿಪಿ8 ಬಿ ಎಂದು ಗುರುತಿಸಲಾಯಿತು. ದಿಃ10.3.2022 ರಂದು ನಾನು ಮನೆಯಲ್ಲಿರುವಾಗ ರಾಬರ್ಟಸನ್ ಪೇಟೆ ಇಂದ ರೈಟರ್ ರವರು ಪೋನ್ ಮಾಡಿ ಕಳ್ಳತನವಾಗಿರುವ ಒಡವೆಗಳನ್ನು ತೂಕ ಮಾಡಿಕೊಡುವಂತೆ ಕರೆದಿರುತ್ತಾರೆ. ನಾನು ಕೂಡಲೇ ರಾಬರ್ಟಸನ್ ಪೇಟೆಯ ಪೊಲೀಸ್ ಠಾಣೆಗೆ ಹೋಗಿ ಚಿನ್ನದ ಮಾಂಗಲ್ಯದ ಚೈನ್ ತೂಕ 34 ಗ್ರಾಂ 900 ಮಿಲಿ, ಒಂದು ಬಂಗಾರದ ಬಳೆಯ ತೂಕ 14 ಗ್ರಾಂ 400 ಮಿಲಿ ಮತ್ತು ಒಂದು ಜೊತೆಯ ಬಂಗಾರದ ಓಲೆಗಳ ತೂಕ 8 ಗ್ರಾಂ 100 ಮಿಲಿ ಇರುತ್ತದೆ ಎಂದು ಒರೆಗಲ್ ಮೂಲಕ ಪರೀಕ್ಷಿಸಿ ಎಲೆಕ್ಟ್ರಾನಿಕ್ ತೂಕದ ಯಂತ್ರದ ಮೂಲಕ ತೂಕವನ್ನು ತಿಳಿಸಿರುತ್ತೇನೆ. ನಾನು ಬಂಗಾರದ ಒಡವೆಗಳನ್ನು ಪರೀಕ್ಷಿಸಿ ಮತ್ತು ತೂಕ ಮಾಡಿರುವ ಬಗ್ಗೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ಮತ್ತು ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಅದನ್ನು ನಿಪಿ9 ಎಂದು, ಸಹಿಯನ್ನು ನಿಪಿ9 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. ನಿಪಿ8 ರ ಪಂಚನಾಮೆಯನ್ನು ಪೊಲೀಸರು ಬೆಳಿಗ್ಗೆ 10.30 ರಿಂದ 11.30 ರವರೆಗೆ ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ8 ರ ಪಂಚನಾಮೆಗೆ ಸಹಿ ಮಾಡುವಾಗ ಚಾಸ 9 ರಿಂದ 11 ರವರೂ ಸಹ ಇರುತ್ತಾರೆಂದರೆ ಸರಿಯಲ್ಲ. ನಿಪಿ8 ರ ಪಂಚನಾಮೆಯನ್ನು ಮಾಡುವಾಗ ನಾನು ಬಂಗಾರದ ಒಡವೆಗಳನ್ನು ಪರೀಕ್ಷಿಸಿ ತೂಕ ಮಾಡಿ, ದೃಢೀಕರಣ ಪತ್ರ ನೀಡಿರುವುದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ8 ರ ಪಂಚನಾಮೆ ಬಗ್ಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದಃ-**

4. ನನಗೆ ಪೊಲೀಸ್ ಠಾಣೆ ಇಂದ ಕರೆ ಮಾಡಿದ ಪೊಲೀಸರ ಹೆಸರು ಗೊತ್ತಿಲ್ಲ. ನಾನು ಹೇಳಿದಂತೆ ಪೊಲೀಸ್ ಠಾಣೆಗೆ ಹೋಗಿ ಒಡವೆಗಳನ್ನು ಪರೀಕ್ಷಿಸಿ ತೂಕ ಮಾಡಿ ದೃಢೀಕರಣ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಹಾಲಿ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.